# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **648 (567)**
ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 22.07.2024
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ವಿವರ</th></tr>
<tr><td>ಅ)</td><td>ಪ್ರಾಥಮಿಕ /ಪ್ರೌಢ ಶಾಲಾ ಶಿಕ್ಷಕರ/ ಮುಖ್ಯ ಶಿಕ್ಷಕರ / ಹಿರಿಯ ಮುಖ್ಯ ಶಿಕ್ಷಕರುಗಳ ಬಡ್ತಿ ಪ್ರಕ್ರಿಯೆಗಳು ಯಾವ ಹಂತದಲ್ಲಿವೆ;</td><td>

• ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಮುಖ್ಯ ಶಿಕ್ಷಕರ ವೃಂದಕ್ಕೂ ಮತ್ತು ಮುಖ್ಯ ಶಿಕ್ಷಕರ ವೃಂದದಿಂದ ಹಿರಿಯ ಮುಖ್ಯ ಶಿಕ್ಷಕರ ವೃಂದಕ್ಕೂ ಬಡ್ತಿ ನೀಡುವ ಸಂಬಂಧ ಅಧಿಸೂಚನೆ ನೀಡಲಾಗಿತ್ತು.<br><br>
• ಜೇಷ್ಠತೆ ಹಾಗೂ ಮೀಸಲಾತಿಯಂತೆ ಕೆಳಕಂಡಂತೆ ಪ್ರೌಶಾಲಾ ಮುಖ್ಯ ಶಿಕ್ಷಕರು ಉಪ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ.<br><br>
<table>
<tr><th>ಕ್ರ. ಸಂ</th><th>ವಿಭಾಗ</th><th>ಮುಂಬಡ್ತಿ ದಿನಾಂಕ</th><th>ಒಟ್ಟು</th></tr>
<tr><td>01</td><td>ಬೆಂಗಳೂರು</td><td>30/12/2023</td><td>157</td></tr>
<tr><td>02</td><td>ಮೈಸೂರು</td><td>30/12/2023</td><td>164</td></tr>
<tr><td></td><td></td><td>ಒಟ್ಟು</td><td>321</td></tr>
</table>
<br>
ಪ್ರಸ್ತುತ ವರ್ಷದಲ್ಲಿ ಬೆಂಗಳೂರು ವಿಭಾಗದಲ್ಲಿ ಜೇಷ್ಠತೆ ಮತ್ತು ಮೀಸಲಾತಿಯಂತೆ 147 ಹಾಗೂ ಮೈಸೂರು ವಿಭಾಗದಲ್ಲಿ ಒಟ್ಟು 100 ಹುದ್ದೆಗಳಿಗೆ ಪ್ರೌಢಶಾಲಾ ಸಹ ಶಿಕ್ಷಕರಿಗೆ ಮುಂಬಡ್ತಿ ನೀಡಲು ಪ್ರಸ್ತಾವನೆಯನ್ನು ಉಪ ನಿರ್ದೇಶಕರು (ಆಡಳಿತ) ಇವರಿಗೆ ಸಲ್ಲಿಸಲು ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಪ್ರಸ್ತಾವನೆಗಳು ಸ್ವೀಕೃತವಾಗಿದೆ. ಪ್ರಸ್ತುತ ಆಯುಕ್ತಾಲಯದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ.<br><br>
ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗೆ ಬಡ್ತಿಗೆ ಸಂಬಂಧಿಸಿದಂತೆ 2016 ರ ವೃಂದ ಮತ್ತು ನೇಮಕಾತಿ ನಿಯಮಗಳು ಚಾಲ್ತಿಯಲ್ಲಿದ್ದು, ಅದರಲ್ಲಿ ಪಿ.ಎಸ್.ಟಿ ವೃಂದಕ್ಕೆ ಅರ್ಹತೆ ಮತ್ತು ಜೇಷ್ಠತೆ ಹೊಂದಿರುವ ಶಿಕ್ಷಕರಿಗೆ ಬಡ್ತಿ ನೀಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ ಜಿ.ಪಿ.ಟಿ ಶಿಕ್ಷಕರ ಬಡ್ತಿಗೆ ಸಂಬಂಧಿಸಿದಂತೆ ಯಾವುದೇ ಮಾನದಂಡಗಳು ನಿಗದಿಯಾಗಿರುವುದಿಲ್ಲ. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 6 ರಿಂದ 8ನೇ ತರಗತಿ ಪದವೀಧರ ಶಿಕ್ಷಕರಿಗೆ ಪ್ರೌಢಶಾಲಾ ಸಹ
</td></tr>
</table>

| | | |
|---|---|---|
| | | ಶಿಕ್ಷಕರು ಗ್ರೇಡ್-2 ಹುದ್ದೆಗೆ ಬಡ್ತಿ ನೀಡುವ ಕುರಿತು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 3443-3503/2020 ಮತ್ತು 857-917/2021 ಗಳಲ್ಲಿ ಶ್ರೀ ನಾರಾಯಣ ಬಾಳಪ್ಪ ಮತ್ತಿತರು ದಾಖಲಿಸಿದ್ದ ದಾವೆಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ದಿನಾಂಕ: 12.05.2021 ರಂದು ತೀರ್ಪು ನೀಡಿದ್ದು, ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯಿಂದ ಪ್ರೌಢಶಾಲಾ ಶಿಕ್ಷಕರ ಹುದ್ದೆಗೆ ನೀಡಿರುವ ಬಡ್ತಿಗಳನ್ನು ಹಿಂಪಡೆಯಲು ಸೂಚಿಸಿರುತ್ತದೆ. ಆದ್ದರಿಂದ 3343-3503/2020 ರಲ್ಲಿ ದಿನಾಂಕ:12.05.2021 ರ ತೀರ್ಪು ಆದ ನಂತರ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯಿಂದ ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗೆ ಬಡ್ತಿ ನೀಡುವುದನ್ನು ತಡೆಹಿಡಿಯಲು ಸೂಚಿಸಲಾಗಿದೆ |
| ಆ) | ಪ್ರಾಥಮಿಕ /ಪ್ರೌಢ ಶಾಲಾ ಶಿಕ್ಷಕರ/ ಮುಖ್ಯ ಶಿಕ್ಷಕರ / ಹಿರಿಯ ಮುಖ್ಯ ಶಿಕ್ಷಕರುಗಳ ಬಡ್ತಿ ಪ್ರಕ್ರಿಯೆಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | • ಈ ಮಧ್ಯೆ ಜಿ.ಪಿ.ಟಿ ಶಿಕ್ಷಕರು ಸಿ & ಆರ್ ಬಡ್ತಿ ನಿಯಮವನ್ನು ಅಂತಿಮಗೊಳಿಸದೇ ಬಡ್ತಿ ನೀಡುವ ಕ್ರಮಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 1134-1143/2022 ನ್ನು ದಾಖಲಿಸಿರುತ್ತಾರೆ. ಪ್ರಸ್ತುತ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.<br>• ಕಾಲಕಾಲಕ್ಕೆ ಬಡ್ತಿಗಳನ್ನು ನೀಡುತ್ತಿರುವುದ ರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.<br>• ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲಾ ಸಹಶಿಕ್ಷಕರ ವೃಂದದ ಹುದ್ದೆಗೆ ಬಡ್ತಿ ನೀಡುವುದು ಸ್ಥಗಿತಗೊಂಡಿರುತ್ತದೆ. |
| ಇ) | ಹಾಗಿದ್ದಲ್ಲಿ ಸದರಿ ಶಿಕ್ಷಕರುಗಳಿಗೆ ಯಾವ ಕಾಲಮಿತಿಯೊಳಗೆ ಬಡ್ತಿ ನೀಡಲಾಗುವುದು? | ನ್ಯಾಯಾಲಯದ ಅಂತಿಮ ತೀರ್ಪು ಬಂದ ನಂತರ ಪ್ರಕ್ರಿಯೆಯನ್ನು ಮುಂದುವರೆಸಲಾಗುವುದು.<br><br>ಪ್ರಸ್ತುತ ವರ್ಷದಲ್ಲಿ ಬೆಂಳೂರು ವಿಭಾಗದಲ್ಲಿ ಜೇಷ್ಠತೆ ಮತ್ತು ಮೀಸಲಾತಿಯಂತೆ 147 ಹಾಗೂ ಮೈಸೂರು ವಿಭಾಗದಲ್ಲಿ ಒಟ್ಟು 100 ಹುದ್ದೆಗಳಿಗೆ ಪ್ರೌಢಶಾಲಾ ಸಹ ಶಿಕ್ಷಕರಿಗೆ ಮುಂಬಡ್ತಿ ನೀಡಲು ಪ್ರಸ್ತಾವನೆಯನ್ನು ಉಪ ನಿರ್ದೇಶಕರು (ಆಡಳಿತ) ಇವರಿಗೆ ಸಲ್ಲಿಸಲು ಸೂಚಿಸಲಾಗಿದೆ. ಅದರಂತೆ ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಆಯುಕ್ತಾಲಯದಲ್ಲಿ ಎರಡು ವಿಭಾಗಗಳ ಸಹ ಶಿಕ್ಷಕರ ಮುಂಬಡ್ತಿ ಪ್ರಸ್ತಾವನೆಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ಬಡ್ತ ನೀಡಲು ಕ್ರಮವಹಿಸಲಾಗುತ್ತಿದೆ.<br><br>ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:3443-3503/2020 ಮತ್ತು 857-917/2021 ಗಳ ತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು, ಇಲ್ಲಿ ರಿಟ್ ಪಿಟಿಷನ್ ಸಂಖ್ಯೆ: 16936/2021 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ದಿನಾಂಕ: 11.07.2024 ರಂದು |

| | | |
|---|---|---|
| | | ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿದ್ದು, ಸದರಿ ವಿಚಾರಣೆಯಲ್ಲಿ ಮಾನ್ಯ ನ್ಯಾಯಾಧೀಶರು ಎರಡು ವಾರದೊಳಗಾಗಿ 2016ರ ವೃಂದ ಮತ್ತು ನೇಮಕಾತಿ ನಿಯಮದ ಕರಡನ್ನು ಪ್ರಕಟಿಸಿ, ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲು ಸೂಚಿಸಿರುತ್ತದೆ.<br><br>• 2016 ರ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ ನಡೆಯುತ್ತಿದ್ದು, ಸದರಿ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಯು ಅಂತಿಮವಾದ ನಂತರ ಪಿ.ಎಸ್.ಟಿ ಮತ್ತು ಜಿ.ಪಿ.ಟಿ ಶಿಕ್ಷಕರಿಗೆ ಬಡ್ತಿ ನೀಡುವ ಸಂಬಂಧ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |

**ಸಂಖ್ಯೆ: ಇಪಿ 65 ಎಸ್‌ಓಹೆಚ್ 2024**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು